RNU AIR DHARWAD

OCTOBER 09, 2025

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

“ನಿಮ್ಮ ಕಣ್ಣುಗಳನ್ನು ಪ್ರೀತಿಸಿ” ಎಂಬ ಧ್ಯೇಯದೊಂದಿಗೆ, ಇಂದು, ವಿಶ್ವ ದೃಷ್ಟಿ ದಿನಾಚರಣೆ. ವಿಶ್ವ ಆರೋಗ್ಯ ಸಂಸ್ಥೆ ವರದಿ ಪ್ರಕಾರ, ಕನಿಷ್ಟ 2 ದಶಾಂಶ 2 ಶತ ಕೋಟಿ ಜನ, ಸಮೀಪದ ಅಥವಾ ದೂರದ ದೃಷ್ಟಿದೋಷ ಹೊಂದಿದ್ದಾರೆ. ದೃಷ್ಟಿಹೀನತೆ ಹೊಂದಿರುವ, ದೈಹಿಕ, ಭಾವನಾತ್ಮಕ, ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳು ಹಾಗೂ ಆರೋಗ್ಯಕರ ದೃಷ್ಟಿ ಕಾಪಾಡಿಕೊಳ್ಳುವ ಬಗ್ಗೆ, ಜನ ಜಾಗ್ರತಿ ಮೂಡಿಸಲು, ಅಕ್ಟೋಬರ್ ಎರಡನೇ ಗುರುವಾರ, ದೃಷ್ಟಿ ದಿನ ಆಚರಿಸಲಾಗುತ್ತದೆ.

<><><>

‘ಜನರಿಗಾಗಿ ಅಂಚೆ; ಸ್ಥಳೀಯ ಸೇವೆ, ಜಾಗತಿಕ ವ್ಯಾಪ್ತಿ’ ಧ್ಯೇಯದೊಂದಿಗೆ, ಇಂದು ವಿಶ್ವ ಅಂಚೆ ದಿನಾಚರಣೆ. 1874ರ ಅಕ್ಟೋಬರ್ 9 ರಂದು, ಸ್ವಿಸ್ ರಾಜಧಾನಿ ಬರ್ನ್‌ನಲ್ಲಿ, ಸಾರ್ವತ್ರಿಕ ಅಂಚೆ ಒಕ್ಕೂಟ ಸ್ಥಾಪನೆಗೊಂಡಿತು. ಇಂದು ಅಂಚೆ ಇಲಾಖೆಯ, 151ನೇ ವಾರ್ಷಿಕೋತ್ಸವ.

<><><>

ಪ್ರಸಕ್ತ ಸಾಲಿನ, ಸ್ನಾತಕೋತ್ತರ ವೈದ್ಯಕೀಯ ಹಾಗೂ ಡಿಪ್ಲೊಮಾ ಕೋರ್ಸ್‌ಗಳ, ನೀಟ್ ಪ್ರವೇಶಕ್ಕಾಗಿ, ಆನ್ ಲೈನ್ ಮೂಲಕ, ಅರ್ಜಿ ಸಲ್ಲಿಸಲು, ಈ ತಿಂಗಳ 15 ನೇ ತಾರೀಖು, ಬೆಳಗ್ಗೆ 11 ಗಂಟೆ ವರೆಗೆ, ಅವಧಿ ವಿಸ್ತರಿಸಲಾಗಿದೆ ಎಂದು, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ, ಕಾರ್ಯನಿರ್ವಾಹಕ ನಿರ್ದೇಶಕ, ಎಚ್.ಪ್ರಸನ್ನ ತಿಳಿಸಿದ್ದಾರೆ.

<><><>

ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು, ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹಾಗೂ ರಾಜ್ಯ ವಿಜ್ಞಾನ ಅಕಾದೆಮಿ ಸಹಯೋಗದಲ್ಲಿ, ‘ನಾನೂ ವಿಜ್ಞಾನಿ’ ಧ್ಯೇಯದ, ಟೆಲಿಸ್ಕೋಪ್ ರಚನಾ ಕಮ್ಮಟ, ದೊಡ್ಡಬಳ್ಳಾಪುರದ, ಬೆಸೆಂಟ್ ಪಾರ್ಕ್‌ನ, ಸ್ಕೌಟ್ಸ್ ಕ್ಯಾಂಪ್‌ನಲ್ಲಿ, 9 ದಿನಗಳ ಬಳಿಕ, ಇಂದು ಸಮಾರೋಪಗೊಂಡಿತು. ರಾಜ್ಯದ 31 ಜಿಲ್ಲೆಗಳಿಂದ ಆಯ್ದ, 152 ವಿದ್ಯಾರ್ಥಿಗಳು, 60 ಜನ ಶಿಕ್ಷಕರು ಹಾಗೂ 10ಕ್ಕೂ ಹೆಚ್ಚು ತಜ್ಞ ವಿಜ್ಞಾನಿಗಳು ಭಾಗವಹಿಸಿದ್ದರು. ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಪಾಲ್ಗೊಂಡು, ಪುರಸ್ಕಾರಗಳನ್ನು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೀಡಿ, ಗೌರವಿಸಿದರು.

<><><>

ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ, ಬೆಳಗಾವಿ ಜಿಲ್ಲೆ, ಚಿಕ್ಕೋಡಿ ಶೈಕ್ಷಣಿಕ ಜಿಲ್ಲಾ ವಿಭಾಗದ, ಗೋಕಾಕ ತಾಲೂಕು, ಮೂಡಲಗಿ ವಲಯದ, ಪಾಮಲದಿನ್ನಿ ಗ್ರಾಮದ, ಶ್ರೀಮತಿ ನೀಲಮ್ಮ ವೀರಪ್ಪ ವಿಜಯನಗರ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ, 9ನೇ ತರಗತಿ ವಿದ್ಯಾರ್ಥಿನಿ, ಶ್ರಾವಂತಿ ರಾಜು ದಂಡಿನ.

ಶ್ರಾವಂತಿ ರಾಜು ದಂಡಿನ ಧ್ವನಿ (24) ಸೆಕೆಂದುಗಳು

<><><>

ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿನಿ, ಎಸ್.ಪ್ರೇಮಾ, ಕನ್ನಡ ವಿ ಯದಲ್ಲಿ ಅತೀ ಹೆಚ್ಚು ಅಂಕ ಗಳಿಸಿ, 11 ಚಿನ್ನದ ಪದಕಗಳನ್ನು ಪಡೆದು, ಅದ್ವಿತೀಯ ಸಾಧನೆ ಗೈಯ್ದಿದ್ದಾರೆ. ಓರ್ವ ಸಾಮಾನ್ಯ ಬೀದಿ ಬದಿ ವ್ಯಾಪಾರಿಯೊಬ್ಬರ ಮಗಳು ಎನ್ನುವುದು ವಿಶೇ ಎಂದು, ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ, ಅಭಿನಂದಿಸಿದ್ದಾರೆ. ಅಸಂಘಟಿಯ ವಲಯದ, ಶ್ರಮಿಕರೊಬ್ಬರ ಮಗಳು, ತಮಗಿರುವ ಸವಾಲಿನ ಸನ್ನಿವೇಶದ ಹೊರತಾಗಿಯೂ, ಇಂತಹ ಅನನ್ಯ ಸಾಧನೆ ಮಾಡಿರುವುದು ಹೆಮ್ಮೆ ತಂದಿದೆ. ಈ ಸಾಧನೆ ಎಲ್ಲರಿಗೂ ಸ್ಫೂರ್ತಿಯಾಗಲಿ, ಎಂದಿದ್ದಾರೆ.

<><><>

ಉದ್ಯೋಗಾವಕಾಶ ಹಾಗೂ ಸಾಮಾಜಿಕ ಭದ್ರತೆ ಒದಗಿಸಲು, ಪ್ರಧಾನಮಂತ್ರಿ ವಿಕಸಿತ ಭಾರತ, ರೋಜ್‌ಗಾರ್ ಯೋಜನೆಗೆ, ಕೇಂದ್ರ ಸರ್ಕಾರ ಚಾಲನೆ ನೀಡಿದೆ. ಪ್ರಥಮ ಬಾರಿ ಉದ್ಯೋಗಿಗೆ 15 ಸಾವಿರ ರೂಪಾಯಿ, ಹೆಚ್ಚುವರಿ ಉದ್ಯೋಗ ಸೃಷ್ಟಿಸಲು, ಉದ್ಯೋಗದಾತರಿಗೆ ಎರಡು ವ ಗಳ ಅವಧಿಗೆ, ಪ್ರತಿ ಹೊಸ ಉದ್ಯೋಗಕ್ಕೆ, ತಿಂಗಳಿಗೆ 3 ಸಾವಿರ ರೂಪಾಯಿ ವರೆಗೆ ಪ್ರೋತ್ಸಾಹ ಧನ ನೀಡಲಾಗುತ್ತಿದೆ ಎಂದು, ಬೆಂಗಳೂರಿನ ಇಂದಿರಾನಗರದ, ಪ್ರಾದೇಶಿಕ ಭವಿಷ್ಯ ನಿಧಿ ಕಚೇರಿ ಆಯುಕ್ತ, ಎನ್.ಗೋಪಾಲಕೃ ್ಣನ್ ತಿಳಿಸಿದ್ದಾರೆ.

<><><>

ಓ ನನ್ನ ದೇಶ ಬಾಂಧವರೇ.. (15) ಸೆಕೆಂದುಗಳು

<><><>

ಕರ್ನಾಟಕ ರಾಜ್ಯೋತ್ಸವ, ಸಂತ ಶಿಶುನಾಳ ಪ್ರಶಸ್ತಿಗೆ ಭಾಜನರಾಗಿದ್ದ, ಆಕಾಶವಾಣಿ ಧಾರವಾಡ ಕೇಂದ್ರದ, ನಿವೃತ್ತ ಉದ್ಘೋಷಕಿ, 'ಎ ಶ್ರೇಣಿ'ಯ ಖ್ಯಾತ ಸುಗಮ ಸಂಗೀತ ಗಾಯಕಿ, ಅನುರಾಧಾ ಧಾರೇಶ್ವರ, ಇಂದು ಬೆಳಗಿನ ಜಾವ ಧಾರವಾಡದಲ್ಲಿ ನಿಧನರಾದರು. ಅವರಿಗೆ 87 ವರ್ಷ ವಯಸ್ಸಾಗಿತ್ತು. ವಿಶ್ವ ಕೊಂಕಣಿ ಸಮ್ಮೇಳನದಲ್ಲಿ, ಸುಗಮ ಸಂಗೀತ ಕ್ಷೇತ್ರದ ಸಾಧನೆಗಾಗಿ, ಸಮ್ಮಾನ್, ಕರ್ನಾಟಕ ಸಂಗೀತ, ನೃತ್ಯ ಅಕಾದೆಮಿ ಗೌರವ ಪ್ರಶಸ್ತಿ ಪುರಸ್ಕೃತರು ಹಾಗೂ ಕರ್ನಾಟಕ ಕಲಾ ತಿಲಕ ಬಿರುದಾಂಕಿತ, ಅನುರಾಧಾ ಧಾರೇಶ್ವರ ಅವರ ನಿಧನಕ್ಕೆ, ಗಣ್ಯರು ಸೇರಿದಂತೆ ಆಕಾಶವಾಣಿ ಸಿಬ್ಬಂದಿ ವರ್ಗ ಕಂಬನಿ ಮಿಡಿದಿದೆ. ಧಾರವಾಡದ ಹೊಸಯಲ್ಲಾಪುರ ರುದ್ರಭೂಮಿಯಲ್ಲಿ, ಪಾರ್ಥಿವ ಶರೀರದ ಅಂತ್ಯಕ್ರಿಯೆ ಇಂದು ಸಂಜೆ 4 ಗಂಟೆ ಬಳಿಕ ನೆರವೇರಲಿದೆ ಎಂದು, ಕುಟುಂಬ ತಿಳಿಸಿದೆ.

ಹರ್ಷ/ಲತಾ ಹೆಗಡೆ/ಸುರೇಖಾ ಸುರೇಶ/ವಿಷಯಾ ಜೇವೂರ

<><><>

ಅಮೆರಿಕ ಮೂಲದ, ಕೃತಕ ಬುದ್ಧಿಮತ್ತೆ ಸಂಶೋಧನಾ ಕಂಪೆನಿ, ಆಂಥ್ರೊಪಿಕ್, ಭಾರತದಲ್ಲಿ ತನ್ನ ಮೊದಲ ಕಚೇರಿ ಆರಂಭಿಸಲು, ಬೆಂಗಳೂರನ್ನು ಆಯ್ಕೆ ಮಾಡಿಕೊಂಡಿದೆ; ಟೋಕಿಯೊ ನಂತರ, ಏ ್ಯಾ-ಪೆಸಿಫಿಕ್ ವಲಯದಲ್ಲಿ, ಇದು ಎರಡನೆ ಕಚೇರಿ ಎಂದು ಮಾಹಿತಿ ತಂತ್ರಜ್ಞಾನ ಖಾತೆ ಸಚಿವ, ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ.

<><><>

ವಿಶ್ವ ಬ್ಯಾಂಕ್ ನೆರವಿನ, ಭಾರತ ಸರ್ಕಾರದ, RAMP ಯೋಜನೆಯಡಿ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಪ್ರಾದೇಶಿಕ ಕೇಂದ್ರ, ಕಲಬುರಗಿ ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ, ಇನ್‌ಕ್ಯುಬೇಷನ್ ತರಬೇತಿ ಕಾರ್ಯಾಗಾರ, ಜರುಗಿತು.

<><><>

ಒಡಿಶಾ ರಾಜಧಾನಿ, ಭುವನೇಶ್ವರದಲ್ಲಿ ನಾಳೆಯಿಂದ 14ರ ವರೆಗೆ ಆಯೋಜಿತ, 40ನೇ ರಾಷ್ಟ್ರೀಯ ಕಿರಿಯರ, ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ಗೆ, ಶಿವಮೊಗ್ಗ ಜಿಲ್ಲೆಯ, ವಸತಿ ಶಾಲೆ ಹಾಗೂ ಕ್ರೀಡಾ ಶಾಲೆಯ ಆರು ಕ್ರೀಡಾಪಟುಗಳು ಆಯ್ಕೆಯಾಗಿದ್ದಾರೆ.

<><><>

ರಾಜ್ಯದಾದ್ಯಂತ ಇಂದು, ಗುಡುಗು ಸಹಿತ, ಜೋರಾದ ಗಾ ಳಿಯೊಂದಿಗೆ, ಅಲ್ಲಲ್ಲಿ ಚದುರಿದಂತೆ, ಹಗುರದಿಂದ, ಸಾಧಾರಣ ಮಳೆಯಾಗಲಿದೆ. ಕರಾವಳಿ, ಮಲೆನಾಡು ಮತ್ತು ದಕ್ಷಿಣ ಒಳನಾಡು ಜಿಲ್ಲೆಗಳಲ್ಲಿ, ಇಂದು ಮತ್ತು ನಾಳೆ, ಅಲ್ಲಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ ಇದೆ ಎಂದು, ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ತಿಳಿಸಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.